# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ಎಸ್.ಸಿ. ಸಂಖ್ಯೆಃ 1/2020

ಅ.ಸಾ. 10

ದೊ.ಸಾ. 08

| | | |
|---|---|---|
| ಸಾಕ್ಷಿಯ ಹೆಸರು | ಃ | ಚನಬಸವ್ವ ನಟಗಲ್ |
| ತಂದೆ ಹೆಸರು | ಃ | ಚನ್ನಬಸಪ್ಪ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಕಂಪ್ಯೂಟರ್ ಆಪರೇಟರ್, ಗ್ರಾಮ ಪಂಚಾಯಿತಿ, ಹಂಗರಕಿ |
| ವಾಸಸ್ಥಳ | ಃ | ಗರಗ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | ಃ | 15/12/2021 |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

2010-11 ರಿಂದ ಈವರೆಗೆ ಕಂಪ್ಯೂಟರ್ ಅಪರೇಟರ್ ಆಗಿ ಗರಗ ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಫ್ರಾಸಾ.1 ಸದರಿ ಪಂಚಾಯಿತಿಯಲ್ಲಿ ಪಿಡಿಓ., ಆಗಿ ಕೆಲಸ ಮಾಡುತ್ತಿದ್ದರು. ಫ್ರಾಸಾ.2 ಪಂಚಾಯಿತಿಯ ಗುಮಾಸ್ತನಾಗಿ, ಫ್ರಾಸಾ.3 ರಾಮಕೃಷ್ಣ ಸ್ವಚ್ಛತಾ ಕಾರ್ಮಿಕನಾಗಿ, ಶಿವಪ್ಪ ನವಲೂರು ಸಿಪಾಯಿಯಾಗಿ, ಶಿವಪ್ಪ ಹುಲಗಣ್ಣವರ ವಾಲ್‌ಮನ್ ಆಗಿ ಕೆಲಸ ಮಾಡುತ್ತಾರೆ. ಫ್ರಾಸಾ.5 ಪಂಚಾಯಿತಿಯ ಆಗೀನ ಅಧ್ಯಕ್ಷರಾಗಿದ್ದರು. ಚಾಸಾ.10 ಪಂಚಾಯಿತಿಯ ಆಗೀನ ಉಪಾಧ್ಯಕ್ಷರಾಗಿದ್ದರು. ಚಾಸಾ.11 ಮತ್ತು 12 ಆ ಸಮಯದಲ್ಲಿ ಪಂಚಾಯಿತಿಯ ಸದಸ್ಯರಾಗಿದ್ದರು.

2. ನಾನು ಹಂಗರಕಿ ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿದ್ದರೂ ಸಹ ಬೈಲಹೊಂಗಲದಲ್ಲಿ ವಾಸ ಮಾಡಿಕೊಂಡಿದ್ದು ದಿನಾಲೂ ಹೋಗಿ ಬರುತ್ತಿದ್ದೆ.

3. ದಿಃ 15/02/2018 ರಂದು ನಾನು ಬೈಲಹೊಂಗಲದಿಂದ ಪಂಚಾಯಿತಿ ಕಚೇರಿಗೆ ಬಂದಾಗ ಬೆಳಿಗ್ಗೆ 11.45 ಗಂಟೆಯಾಗಿತ್ತು. ಆ ದಿನ ಪಂಚಾಯಿತಿಗೆ ಎನ್.ಎಲ್.ಎಂ., ಸ್ಕೀಂ ನ ಅಧಿಕಾರಿಗಳು ಬರುವವರಿದ್ದರು. ನಾನು ಪಂಚಾಯಿತಿ ಕಚೇರಿಗೆ ಬಂದಾಗ ಕಚೇರಿಯಲ್ಲಿ ಜನ

ಸೇರಿದ್ದರು. ಏನಾಯಿತು ಎಂದು ಕೇಳಿದಾಗ ಪಂಚಾಯಿತಿಯಲ್ಲಿ ಜಗಳವಾಗಿದೆ ಎಂದು ಹೇಳಿದರು. ವಿಷಯ ತಿಳಿದು ನಾನು ನಮ್ಮ ಮನೆಗೆ ಮರಳಿ ಹೋದೆ. ನಾನು ಕಚೇರಿಯ ಒಳಗೆ ಹೋಗಲೇ ಇಲ್ಲ. ಫೈಲುಗಳಿಗೆ ಬೆಂಕಿ ಹಚ್ಚಿದ್ದಾರೆಂದು ಗೊತ್ತಾಯಿತು. ಎಂ.ಜಿ.ಎನ್.ಆರ್., ಎನ್ ಎಂ ಎಲ್., ಮತ್ತು 14 ನೇ ಹಣಕಾಸಿನ ಫೈಲುಗಳಿಗೆ ಬೆಂಕಿ ಹತ್ತಿದೆ ಎಂದು ಗೊತ್ತಾಯಿತು. ಫೈಲುಗಳಿಗೆ ಪಂಚಾಯಿತಿಯ ಆವರಣದಲ್ಲಿ ಬೆಂಕಿ ಹತ್ತಿದೆ ಎಂದು ಹೇಳಿದರು. ಸದರಿ ಫೈಲುಗಳನ್ನು ಆಫೀಸಿನ ಆವರಣದಲ್ಲಿ ಇಡಲಾಗಿತ್ತು. ಫೈಲುಗಳಿಗೆ ಯಾರು ಬೆಂಕಿ ಹಚ್ಚಿದರು ಎಂದು ನನಗೆ ಗೊತ್ತಾಗಿಲ್ಲ. ಬೆಳಿಗ್ಗೆ 10.00 ರಿಂದ 10.30 ಗಂಟೆಯ ಸಮಯದಲ್ಲಿ ಅವುಗಳಿಗೆ ಬೆಂಕಿ ಹತ್ತಿದೆ ಎಂದು ಗೊತ್ತಾಯಿತು.

4. ಸದರಿ ವಿಷಯವನ್ನು ನಾನು ಪಿ.ಡಿ.ಓ.,ರವರಿಗೆ ಫೋನ್ ಮುಖಾಂತರ ತಿಳಿಸಿದೆ. ಅವರು ಆ ದಿನ ಕಚೇರಿಗೆ ಬಂದಿರಲಿಲ್ಲ. ನಂತರ ಅವರು ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ. ಆ ದಿನ ಅರ್ಧ ಮರ್ಧ ಸುಟ್ಟ ಫೈಲುಗಳನ್ನು ನಾನು ನೋಡಿದ್ದೇನೆ. ಅವುಗಳನ್ನು ಒಂದು ಬಾಕ್ಸಿನಲ್ಲಿ ಹಾಕಿಕೊಂಡು ಹೋದರು. ಆ ದಿನ ಅರೆಸುಟ್ಟ ಫೈಲುಗಳನ್ನು ಈಗ ನೋಡಿದಲ್ಲಿ ಗುರ್ತಿಸಲು ಆಗುವುದಿಲ್ಲ. ಪೊಲೀಸರು ನನ್ನನ್ನು ಸಾಕ್ಷಿಯೆಂದು ವಿಚಾರಣೆ ಮಾಡಿದ್ದಾರೆ.

5. ಆರೋಪಿಯನ್ನು ನಾನು ಗ್ರಾಮ ಪಂಚಾಯಿತಿಯ ಕಚೇರಿಯಲ್ಲಿ ನೋಡಿದ್ದೇನೆ. ಕಚೇರಿಯ ಕೆಲಸಗಳಿಗೆ ಆತ ಬರುತ್ತಿದ್ದ. ಘಟನೆಯ ದಿನ ನಾನು ಆರೋಪಿಯನ್ನು ಪಂಚಾಯಿತಿ ಕಚೇರಿಯಲ್ಲಿ ನೋಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀಸವಾಲು ಸಾರ್ವಜನಿಕ ಅಭಿಯೋಜಕರಿಂದಃ**

6. ದಿಃ 15/02/2018 ರಂದು ನಮ್ಮ ಗ್ರಾಮ ಪಂಚಾಯಿತಿಯ ಕಚೇರಿಯಲ್ಲಿ ಅಡಿಟ್ ಇತ್ತು ಅನ್ನುವದು ಸರಿ. ಆ ಕಾರಣಕ್ಕಾಗಿ ನಾನು ಕಚೇರಿಗೆ ಬೇಗನೆ ಬಂದಿದ್ದೆ ಅನ್ನುವುದು ಸರಿಯಲ್ಲ. ಅಡಿಟ್ ಮಾಡಲು ಬರುತ್ತಾರೆಂದು ಬೇಕಾದಂತಹ ಫೈಲುಗಳನ್ನು ಟೇಬಲ್ ಮೇಲೆ ಹೊಂದಿಸಿ ಇಟ್ಟಿದ್ದೇವು ಎಂದರೆ ಸಾಕ್ಷಿಯು ಒಂದು ದಿನ ಮೊದಲೇ ಫೈಲುಗಳನ್ನು ಟೇಬಲ್ ಮೇಲೆ

ಇಟ್ಟಿದ್ದೇವು ಎಂದು ಹೇಳುತ್ತಾರೆ. ಆ ದಿನ ಇತರ ಸಿಬ್ಬಂದಿಗಳೊಂದಿಗೆ ಬೆಳಿಗ್ಗೆ ಚಹಾ ಕುಡಿಯಲು ಹೋದೆವು ಅನ್ನುವುದು ಸರಿಯಲ್ಲ. ನಾವು ಮರಳಿ ಬರುವ ಸಂದರ್ಭದಲ್ಲಿ ಆರೋಪಿ ಟೇಬಲ್ ಮೇಲೆ ಇಟ್ಟ ಕಡತಗಳನ್ನು ಹೊರಗೆ ತೆಗೆದುಕೊಂಡು ಬಂದು ವರಾಂಡ್‌ದಲ್ಲಿಟ್ಟು ನಾವು ಚೀರುವಷ್ಟರಲ್ಲಿ ಫೈಲುಗಳ ಗುಂಪಿಗೆ ಬೆಂಕಿ ಹಚ್ಚಿ ಓಡಿ ಹೋದ ಎಂದರೆ ನಾನು ನೋಡಿಲ್ಲ. ಆ ಸಂದರ್ಭದಲ್ಲಿ ಬೆಳಿಗ್ಗೆ 10.45 ಗಂಟೆಯಾಗಿತ್ತು ಎಂದರೆ ನಾನು ಇನ್ನೂ ಕಚೇರಿಗೆ ಬಂದಿರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸುಡುತ್ತಿರುವ ಕಡತಗಳ ಮೇಲೆ ನೀರು ಹಾಕಿ ಬೆಂಕಿಯನ್ನು ನಂದಿಸಲು ಪ್ರಯತ್ನಿಸಿದೆ ಅನ್ನುವುದು ಸರಿಯಲ್ಲ. ನಾನು ಮತ್ತು ಸಿಬ್ಬಂದಿಗಳು ಆರಿಸುವುದಕ್ಕಿಂತ ಮೊದಲು ಭಾಗಶಃ ಫೈಲುಗಳು ಸುಟ್ಟಿದ್ದವು ಅನ್ನುವುದು ಸರಿಯಲ್ಲ.

7. ಭಾಗಶಃ ಸುಟ್ಟ ಫೈಲುಗಳನ್ನು ನಾನು ಸಿಬ್ಬಂದಿಗಳೊಂದಿಗೆ ಸೇರಿ ಒಂದು ರಟ್ಟಿನ ಪೆಟ್ಟಿಗೆಯಲ್ಲಿ ಹಾಕಿ ಇಟ್ಟೇವು ಅನ್ನುವುದು ಸರಿಯಲ್ಲ. ಸದರಿ ಕಡತಗಳು ಈಗ ನನಗೆ ತೋರಿಸಿದ ಮುಮಾ.1 ಆಗಿವೆ ಅನ್ನುವದು ಸರಿ.

8. ಆರೋಪಿಯೇ ಸದರಿ ಕಡತಗಳಿಗೆ ಬೆಂಕಿ ಹಚ್ಚಿದ್ದಾನೆ ಎಂದರೆ ನಾನು ನೋಡಿಲ್ಲ. ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿಲ್ಲ. ಪೊಲೀಸರಿಗೆ ಈಗ ನನಗೆ ಓದಿ ಹೇಳಿದಂತೆ ನಿಪಿ.11 ರಂತೆ ಹೇಳಿಕೆ ಕೊಟ್ಟಿದ್ದೇನೆ ಅನ್ನುವುದು ಸರಿಯಲ್ಲ. ಘಟನೆಯನ್ನು ನಾನು ಪ್ರತ್ಯೇಕ್ಷವಾಗಿ ನೋಡಿದ್ದರೂ ಸಹ ಆರೋಪಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಪಾಟೀಸವಾಲು ಆರೋಪಿ ಪರವಾಗಿ ಶ್ರೀ. ಎನ್ ಹೆಚ್ ಟಿ ವಕೀಲರಿಂದಃ**

9. ಇಲ್ಲವೆಂದು ಹೇಳುತ್ತಾರೆ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

15/12/2021

**(ಉಮೇಶ ಎಂ ಅಡಿಗ)**

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.